ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ
*ಪ್ರಮಾಣ ಮಾಡಿ ಪ್ರಮಾಣವಚನ ಸ್ವೀಕರಿಸಿ ಪ್ರಾಮಾಣಿಕವಾಗಿ ನಡೆಯದ ರಾಜಕಾರಣಿಗಳಿಗೆ ಏನು ಮಾಡಬೇಕು?*



ಅವರ ತಪ್ಪಿಲ್ಲ. ಅವರು ತೆಗೆದುಕೊಂಡದ್ದು ಪ್ರಮಾಣವಚನವಲ್ಲ, ಪ್ರಮಾಣವಂಚನ! ಸಕಲ ಪ್ರಮಾಣಗಳಲ್ಲೂ ವಂಚಿಸುವೆವೆಂಬ ವಚನ!

ನವಿರವಿ, ಬಾಳೆಹೊನ್ನೂರು
*ಎಲ್ಲಾ ದೇವರು ಬಲಗೈ ಮೇಲ್ಮುಖ ಮಾಡಿದರೆ ತಿಮ್ಮಪ್ಪ ಮಾತ್ರ ಯಾಕೆ ಕೆಳಮುಖ ಮಾಡಿರುವುದು?*
ಎಷ್ಟೇ ಇನ್‌ಸ್ಟಾಲ್‌ಮೆಂಟ್ ಕಟ್ಟಿದರೂ ಕುಬೇರನ ಸಾಲ ತೀರಿಲ್ಲವಾದ್ದರಿಂದ ಕೈ ಚೆಲ್ಲಿ ನಿಂತಿರುವನಂತೆ!

ಹರಳಹಳ್ಳಿ ಪುಟ್ಟರಾಜು, ಪಾಂಡವಪುರ
*ಕೆಲವು ನಟಿಯರೇಕೆ ಹುಚ್ಚಿ ಪಾತ್ರಗಳನ್ನು ಹೆಚ್ಚು ಇಷ್ಟ ಪಡುತ್ತಾರೆ?*
ಸಹಜವಾಗಿ ಅಭಿನಯಿಸಬಹುದಂತೆ!

ಮೊಳಕಾಲ್ಮೂರು ಸುರೇಶ, ಬಳ್ಳಾರಿ
*ಪ್ರತಿದಿನ ಸೇಬು ತಿಂದರೆ ಡಾಕ್ಟರನ್ನು ದೂರ ಇರಿಸಬಹುದಂತೆ. ಹೆಂಡತಿಯನ್ನು ದೂರ ಇರಿಸಬೇಕಾದರೆ?*




ಹಸಿ ಬೆಳ್ಳುಳ್ಳಿ!

ಎಲ್. ಗಿರಿಜಾರಾಜ್, ಬೆಂಗಳೂರು
*ನೋಟಿನಲ್ಲಿ ಗಾಂಧೀಜಿ ಕಣ್ಮುಚ್ಚಿ ಕುಳಿತಿದ್ದರೆ ಇನ್ನಷ್ಟು ಚೆನ್ನಿತ್ತು ಅಲ್ಲವೆ?*
ಕಣ್ಮುಚ್ಚಿರುತ್ತಿದ್ದರಂತೆ. ಆದರೆ ನೋಟು ದಿನೇ ದಿನೇ ಅಪಮೌಲ್ಯವಾಗುತ್ತಿರುವುದನ್ನು ಕಂಡು ಆತಂಕದಿಂದ ಕಣ್ಬಿಟ್ಟಿರುವರಂತೆ!

ಎಚ್.ಆರ್.ದೇಸಾಯಿ, ರಾಯಚೂರು
*ಹೆಂಡತಿ ಆರು ರೂಪದಲ್ಲಿ ಗಂಡನ ಸೇವೆ ಮಾಡಬೇಕಂತೆ. ಗಂಡ ಹೆಂಡತಿಯದು?*
ಡ್ರೈವರ್, ಶಿಶುವಾಹಕ, ಕುಕ್, ಡ್ರೈಕ್ಲೀನರ್, ಸ್ವೀಪರ್, ಷಾಪಿಂಗ್ ಅಸಿಸ್ಟೆಂಟ್, ಎಟಿಎಂ, ಸೆಕ್ಯುರಿಟಿ, ಆಜ್ಞಾಧಾರಕ, ಡಾಗ್ ವಾಕರ್.........

ಕುಮಾರ ಚಲವಾದಿ, ಹೊಳೆನರಸಿಪುರ
*ಕಾಯಾ, ವಾಚಾ, ಮನಸಾ ಪರಿಶುದ್ಧರಾದವರು ಈಗಿನ ಕಾಲದಲ್ಲೂ ಇದ್ದಾರಾ?*
ಆಗಲೂ ಇರಲಿಲ್ಲ! ಕಾಯ ನಿರಂತರ ಕೊಳಕು, ಮಾತು ಇರುವುದೇ ಎಂಜಲಿನ ಜೊತೆ. ಮನ ಮಾತ್ರ ಶುದ್ಧವಿರಬಹುದಷ್ಟೆ.

ವಿ.ಹೇಮಂತಕುಮಾರ್, ಬೆಂಗಳೂರು
*ಚೀನಾದೇಶದ ಮಹಾಗೋಡೆ ನಮ್ಮ ಭಾರತದಲ್ಲಿದ್ದರೆ?*
ಛೆ! ಅಷ್ಟುದ್ದಕ್ಕೂ ಹೊಲಸು ಮಾಡಿಬಿಡುತ್ತಿದ್ದರು. ಅದು ಅಲ್ಲಿ ಇರುವುದೇ ಸೂಕ್ತ, ಸುಮ್ಮನಿರಿ.

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
*ರಾಮನ ಹೆಸರಿನ ನೀವು ಪತ್ನಿಯನ್ನು ಎಂದಾದರೂ ಕಾಡಿಗೆ ಕಳುಹಿಸಿದ್ದೀರಾ?*
ಇತ್ತೀಚೆಗೆ ಹುಲಿ, ಚಿರತೆ, ಆನೆಗಳು ಕಾಡಿನಿಂದ ಓಡಿಬಂದದ್ದು ಇನ್ನೇಕೆ ಎಂದುಕೊಂಡಿರಿ!

ಕೆ.ಎನ್. ನಾರಾಯಣರೆಡ್ಡಿ, ಕೆ.ಜಿ.ಎಫ್.
*ರಾಹುಕಾಲ, ಗುಳಿಕಕಾಲಗಳು ರಾತ್ರಿ ಹೊತ್ತು ಇರುವುದಿಲ್ಲವೇಕೆ?*
ದೇವಲೋಕದಲ್ಲಿ ನೈಟ್ ಷಿಫ್ಟ್ ಇಲ್ಲವಂತೆ!

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
*ಇಡೀ ಜೀವನದ ಕಥೆಯನ್ನು ಒಂದೇ ಸಾಲಿನಲ್ಲಿ ಹೇಳಿ ನೋಡೋಣ...?*
ಮಗುವಾಗಿದ್ದಾಗಿನಿಂದ ಮನಮನವ ಮಣಿಸಿದಾತ ಮುದುಕನಾಗುವವರೆಗೆ ಮಡದಿ ಮಕ್ಕಳೊಡನೆ ಮೋದದಿಂದಿದ್ದು ಮರಣಿಸಿದ!

ಪಿ.ಜಿ. ರಾಘವೇಂದ್ರ, ಮೈಸೂರು
*ನಿಮ್ಮ ವ್ಯಂಗ್ಯಚಿತ್ರ ಹೇಗಿರಬಹುದು ರಾಮ್?*
ವ್ಯಂಗ್ಯದ ವ್ಯಂಗ್ಯವಾದ್ದರಿಂದ ಸ್ಟ್ರೈಟ್ ಲೈನ್!

ಪ್ರವೀಣ ಸು. ಜೋರಾಪುರ, ಬೆಳಗಾವಿ
*ದೇವರಿಗೂ, ಮನುಷ್ಯನಿಗೂ ಏನು ವ್ಯತ್ಯಾಸ?*
ದೇವನಿಂದ ಸೃಷ್ಟಿಯಾದ ಮನುಷ್ಯ ಟೆಂಪೊರರಿ, ಮನುಷ್ಯನಿಂದ ಸೃಷ್ಟಿಯಾದ ದೇವ ಪರ್ಮನೆಂಟ್!

## ಬಹುಮಾನಿತ ಪ್ರಶ್ನೆ

ಡಾ. ವಿ.ಪುಗಳೇಂದಿ, ಸಿರುಗುಪ್ಪ
*ಕವಿಗಳಲ್ಲಿ ಒಬ್ಬರನ್ನು 'ರಾಷ್ಟ್ರಕವಿ' ಎಂದು ಗುರುತಿಸುವಂತೆ ಸ್ವಾಮೀಜಿಗಳಲ್ಲಿ ಒಬ್ಬರನ್ನು ಆರಿಸಿ 'ರಾಷ್ಟ್ರಕಾವಿ' ಎಂದೇಕೆ ಘೋಷಿಸಬಾರದು?*
ಯತ್ನಿಸಿದರಂತೆ. ಆದರೆ 'ರಾಷ್ಟ್ರಕಾವಿ' ಎಂದು ಘೋಷಿಸುವಷ್ಟರಲ್ಲಿ ಆ ಸ್ವಾಮಿ ಸಿಸಿಟಿವಿಗೆ ಸಿಕ್ಕಿ 'ರಾಷ್ಟ್ರಕಾಮಿ' ಎಂದು ಘೋಷಿತನಾದನಂತೆ!

ಆರಿಫ್, ದಾವಣಗೆರೆ
*ಚೆಲ್ಲಾಟವಾಡೋ ವಯಸ್ಸಿನಲ್ಲಿ ಪ್ರೀತಿ ಮುಖ್ಯವೆ?*
ಅದೇ ಮುಖ್ಯ; ಕಾಮವೆಂಬ ಹುಚ್ಚುಕುದುರೆಗೆ ಪ್ರೀತಿಯೇ ಕಡಿವಾಣ.

ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ
*ಸಾಮಾನ್ಯವಾಗಿ ಹೆಂಗಸರೇ ಹೆಚ್ಚಾಗಿ ದೇವಸ್ಥಾನಗಳಿಗೆ ಹೋಗಲು ಕಾರಣವೇನು?*
ಅಂತಹ ವಿಷಮ ಪರಿಸ್ಥಿತಿಯನ್ನು ಹೆಚ್ಚಾಗಿ ಗಂಡಸರೇ ಉಂಟುಮಾಡುವುದರಿಂದ.

ವೈ.ಎನ್. ಸುಂದರೇಶನ್, ಮೈಸೂರು
*ರಸಿಕತೆ ಸನ್ಯಾಸಿಗಳಲ್ಲೇ ಹೆಚ್ಚಾಗಿರುವುದರ ಕಾರಣವೇನು ರಾಮ್‌ರವರೆ?*



ಅವರಿರುವ ಕಡೆಗಳಲ್ಲಿ ರಮಣೀ-ಯತೆ ಹೆಚ್ಚಿರುವುದರಿಂದ!

ಎಸ್. ರಾಧಾಕೃಷ್ಣ, ದೊಡ್ಡಬಳ್ಳಾಪುರ
*ಪ್ರೀತಿಗೂ, ಮತ್ತಿಗೂ ಏನು ವ್ಯತ್ಯಾಸ?*
ಪ್ರೀತಿ ಮುತ್ತು, ಮತ್ತು ಕುತ್ತು.

ತಿಪ್ಪೇಸ್ವಾಮಿ ವೈ, ಹಿರಿಯೂರು
*ಪ್ರೇಮಕ್ಕೆ ಸೈ, ಪ್ರೀತಿಗೆ ಜೈ; ವಿವಾಹಕ್ಕೆ?*
**why?!**

ಎಂ.ಎನ್. ಸೋಮಶೇಖರ್, ಮೈಸೂರು
*ಕಾಫಿಗೂ, ಟೀಗೂ ಏನು ವ್ಯತ್ಯಾಸ?*
ಆಂಗ್ಲದಲ್ಲಾಗಲಿ, ಕನ್ನಡದಲ್ಲಾಗಲಿ ಎರಡು ಟೀಗೆ ಒಂದು ಕಾಫಿ ಸಮ- ಅಕ್ಷರದ ಲೆಕ್ಕದಲ್ಲಿ!

■ ರಾಮ್